**ದಿನಾಂಕ 21.01.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ಶ್ರೀ ಎಸ್.ಎನ್. ಆರ್. ವಾದಿ ಪರ ವಕೀಲರಿಂದ**

ವಾದಿಯು ಯಾವ ವಿಸ್ತೀರ್ಣಕ್ಕೆ ದಾವೆ ಸಲ್ಲಿಸಿದ್ದಾರೆ ಗೊತ್ತಿಲ್ಲ. ದಾವಾ ಸ್ವತ್ತಿನ ಸರ್ವೇ ನಂಬರ್ 117/10 ಆಗಿದೆ. ದಾವೆ ಸರ್ವೇ ನಂಬರ್ ಅನ್ನು ಸರ್ವೇ ಮಾಡಿಸಿಲ್ಲ. ದಾವಾ ಸ್ವತ್ತು ಜೋಡಿ ಇನಾಂ ಸ್ವತ್ತು ಎಂದು ನಾನು ಹೇಳಿರುವುದಿಲ್ಲ. ಸರ್ವೇ ನಂಬರ್ 117ರ ಮೂಲ ಸರ್ವೇ ನಂಬರ್ 1/10ರ ವಿಸ್ತೀರ್ಣ 1 ಎಕರೆ 9 ಗುಂಟೆ ಸ್ವತ್ತು ನನ್ನ ದೊಡ್ಡಪ್ಪನಾದ ಸಾವಿಡೆಂಟಿ ವೆಂಕಟಪ್ಪರವರಿಗೆ ಸೇರಿದ್ದು ಎಂದು ಹೇಳಿದ್ದೇನೆ ಎಂದರೆ ಗೊತಿಲ್ಲ ಎಂದು ನುಡಿಯುತ್ತಾರೆ.

ಸರ್ವೇ ನಂಬರ್ 117ರಲ್ಲಿ ಒಟ್ಟು 3 ಎಕರೆ 25 ಗುಂಟೆ ಸ್ವತ್ತು ಇದೆ. 3 ಎಕರೆ 25 ಗುಂಟೆ ಸ್ವತ್ತು ವಿಭಾಗದಲ್ಲಿ ಬಂದಿದೆ ಎಂದು ತಿಳಿಸಿದ್ದು, ಸದರಿ ವಿಭಾಗದಲ್ಲಿ ಸ್ವತ್ತು ನನಗೆ ಬಂದಿದೆ ಎಂದು ತಿಳಿಸಿದ್ದೇನೆ. ವಿಭಾದ ಸಂದರ್ಭದಲ್ಲಿ ಸರ್ವೇ ನಂಬರ್ 1/10ರ ವಿಸ್ತೀರ್ಣ 1 ಎಕರೆ 9 ಗುಂಟೆ ಸ್ವತ್ತನ್ನು ಸರ್ವೇ ಮಾಡಿಸಿಲ್ಲ. ಸದರಿ ಸ್ವತ್ತು ನನ್ನ ದೊಡ್ಡಪ್ಪನಿಗೆ ಹೇಗೆ ಬಂದಿದೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಸರ್ವೇ ಮಾಡಿಸಲು ತೊಂದರೆ ಇರಲಿಲ್ಲ.

3 ನೇ ಪ್ರತಿವಾದಿಯು 1 ಎಕರೆ 10 ಗುಂಟೆಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ತಿಳಿಸಿದ್ದು, ಸದರಿ ಸ್ವತ್ತು ಅವರಿಗೆ ತಾತನ ಮೂಲಕ ಬಂದಿದೆ ಮತ್ತು ಸದರಿ ಸ್ವತ್ತನ್ನು ಸರ್ವೇ ಮಾಡಿಸಿಲ್ಲ. 1 ನೇ ಪ್ರತಿವಾದಿಯೂ ಸಹ ತನ್ನ ತಾತನ ಮೂಲಕ ಸ್ವತ್ತನ್ನು ಪಡೆದಿದ್ದಾರೆ. ಸರ್ವೇ ನಂಬರ್ 117 ರ ಒಟ್ಟು ವಿಸ್ತೀರ್ಣ 3 ಎಕರೆ 29 ಗುಂಟೆ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ –ಸುಬ್ಬರೆಡ್ಡಿ ಸ್ವತ್ತು, ಪಶ್ಚಿಮಕ್ಕೆ –ಪಿ.ವಿ. ಬೈಯ್ಯಾರೆಡ್ಡಿ ಸ್ವತ್ತು,ಉತ್ತರಕ್ಕೆ – ಮಂಗಮ್ಮರವರ ಸ್ವತ್ತು ಮತ್ತು ದಕ್ಷಿಣಕ್ಕೆ –ಗ್ರಾಮ ಠಾಣಾ ಇದೆ ಎಂದು ನುಡಿಯುತ್ತಾರೆ.

ಸರ್ವೇ ನಂಬರ್ 1/10, ಸರ್ವೇ ನಂಬರ್ 2/1 ಮತ್ತು ಸರ್ವೇ ನಂಬರ್ 2/3 ಸೇರಿ ಸರ್ವೇ ನಂಬರ್ 117 ಆಗಿದೆ ಎಂದು ಹೇಳಿದ್ದು, ಆ ಬಗ್ಗೆ ದಾಖಲೆ ನೀಡಿದ್ದೇನೆ. ಆ ಮೂರು ಸರ್ವೇ ನಂಬರಿನ ಹೊಸ ಸರ್ವೇ ನಂಬರ್ 117 ಆಗಿದೆ ಎಂದು ತಿಳಿಸಲು ಯಾವ ದಾಖಲೆ ಸಲ್ಲಿಸಿದ್ದೇನೆ ನನಗೆ ಗೊತ್ತಿಲ್ಲ.

ಸರ್ವೇ ನಂಬರ್ 1/10, ಸರ್ವೇ ನಂಬರ್ 2/1 ಮತ್ತು ಸರ್ವೇ ನಂಬರ್ 2/3 ಗಳು ಮೊದಲು ಯಾರ ಹೆಸರಿನಲ್ಲಿ ಇದ್ದವು ಗೊತ್ತಿಲ್ಲ. ಸರ್ವೇ ನಂಬರ್ 1/10, ಸರ್ವೇ ನಂಬರ್ 2/1 ಮತ್ತು ಸರ್ವೇ ನಂಬರ್ 2/3 ಸೇರಿ ಹೊಸ ಸರ್ವೇ ನಂಬರ್ 117 ಆಗಿಲ್ಲ ಎಂದರೆ ಗೊತ್ತಿಲ್ಲ.

ಸರ್ವೇ ನಂಬರ್ 117 ರ ಪಹಣಿ ನೋಡಿಲ್ಲ. ಸರ್ವೇ ನಂಬರ್ 117 ರಲ್ಲಿ ನಾಲ್ಕು ಜನರಿಗೆ ಹಕ್ಕಿದೆ ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ವೆಂಕಟನರಸಿಂಹ ಭಟ್ಟಾಚಾರ್ ಬಿನ್ ತಾತಾ ಭಟ್ಟಾಚಾರ್ ಮತ್ತು ಯಗವೂರು ಮದ್ದಿರೆಡ್ಡಿ, ಶಂಕರಪ್ಪ, ಈರಪ್ಪ ರೆಡ್ಡಿ ರವರಿಗೆ ಹಕ್ಕಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ 1 ಎಕರೆ 9 ಗುಂಟೆ ಸ್ವತ್ತಿನ ಹಕ್ಕಿಲ್ಲ ಎಂದರೆ ಸರಿಯಲ್ಲ. ವಿಸ್ತೀರ್ಣ 3 ಎಕರೆ 29 ಗುಂಟೆ ಪೈಕಿ 37 ಗುಂಟೆ ಸ್ವತ್ತಿನಲ್ಲಿ ನನಗೆ ಹಕ್ಕಿದೆ ಎಂದರೆ ಸರಿಯಲ್ಲ . ಸಾಕ್ಷಿಯು ಸ್ವತಃ ನನಗೆ 1 ಎಕರೆ 9 ಗುಂಟೆ ಸ್ವತ್ತಿನಲ್ಲಿ ಹಕ್ಕಿದೆ ಎಂದು ನುಡಿಯುತ್ತಾರೆ.

ವಾದಿಗೆ ದಾವಾ ಸರ್ವೇ ನಂಬರ್ ನಲ್ಲಿ 37 ಗುಂಟೆ ಸ್ವತ್ತು ಇದೆ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತಿನ್ನು ವೆಂಕಟನರಸಿಂಹ ಭಟ್ಟಾಚಾರ್ ಮತ್ತು ಹಾಲಹಸಿಂಗ ಭಟ್ಟಾಚರ್ ರವರ ಮೂಲಕ ಪ್ರತಿಫಲಕ್ಕೆ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಹಾಗಾಗಿ ದಾವಾ ಸ್ವತ್ತಿನ ಸಂಬಂಧ ವಾದಿಯು ಕ್ರಯ ಪತ್ರದಂತೆ ಕಂದಾಯ ದಾಖಲೆಗಳನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಕ್ರಯ ಮಾಡುವ ಮೊದಲು ವೆಂಕಟನರಸಿಂಹ ಭಟ್ಟಾಚಾರ್ ಮತ್ತು ಹಾಲಹಸಿಂಗ ಭಟ್ಟಾಚರ್ ರವರ ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದರು ಎಂದರೆ

ಸರಿಯಲ್ಲ. ವಾದಿಯು ಕ್ರಯ ಪತ್ರದ ನಂತರ ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ನಾವು ವಿಸ್ತೀರ್ಣ 37 ಗುಂಟೆ ಸ್ವತ್ತಿನ ವಾದಿಯ ಸ್ವಾಧೀನಕ್ಕೆ ತೊಂದರೆ ನೀಡಿದ್ದು, ಹಾಗಾಗಿ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಸೇರಿದ 37 ಗುಂಟೆ ಸ್ವತ್ತನ್ನು ಕಬಳಿಸಲು ನಾವು ಮೂವರು ಸ್ವಾಧೀನದಲ್ಲಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ಕಂದಾಯ ದಾಖಲೆಗಳಲ್ಲಿ ವೆಂಕಟನರಸಿಂಹ ಭಟ್ಟಾಚಾರ್ ಮತ್ತು ಹಾಲಹಸಿಂಗ ಭಟ್ಟಾಚರ್ ಹೆಸರು ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.